ಕೆಟ್ಟು ನಿಂತು ಹೋಗಿದ್ದ ಯಂತ್ರವೊಂದನ್ನು ಬಿಚ್ಚಿ ರಿಪೇರಿ ಮಾಡಿ ಜೋಡಿಸುವಷ್ಟರಲ್ಲಿ ನನ್ನ ದೇಹ ಮತ್ತು ಮನಸ್ಸುಗಳೆರಡೂ ಹೈರಾಣಾಗಿ ಹೋಗಿದ್ದವು. ಯಂತ್ರವನ್ನೊಮ್ಮೆ ಚಾಲನೆ ಮಾಡಿ ಎಲ್ಲವೂ ಸುಸ್ಥಿತಿಯಲ್ಲಿವೆ ಎಂಬುದನ್ನು ದೃಢಪಡಿಸಿಕೊಂಡು ನಮ್ಮ ಮೆಂಟೆನನ್ಸ್ ಸೂಪರ್ವೈಸರಿಗೆ ಮಾಹಿತಿ ನೀಡಿ ದೊಡ್ಡದೊಂದು ನಿಟ್ಟುಸಿರುಬಿಟ್ಟು ಕಾರ್ಖಾನೆಯಿಂದ ಹೊರಬಂದಾಗ ಹೊಟ್ಟೆ ತೀವ್ರವಾಗಿ ಹಸಿಯುತ್ತಿದ್ದುದು ಗಮನಕ್ಕೆ ಬಂದಿತು. ಕೈಯ್ಯಲ್ಲಿದ್ದ ವಾಚು ನೋಡಿದೆ. ಗಂಟೆ ಹತ್ತೂವರೆಯಾಗಿತ್ತು. ಕಾರ್ಖಾನೆಯ ಪಾರ್ಕಿಂಗ್ ಸ್ಥಳದಲ್ಲಿದ್ದ ಬೈಕ್ ಹತ್ತಿ ರಸ್ತೆಗೆ ಇಳಿದೆ. ರಸ್ತೆ ಪೂರ್ತಿ ನಿರ್ಜನವಾಗಿತ್ತು. ಸೋಡಿಯಂ ದೀಪಗಳ ಬೆಳಕು ರಸ್ತೆಯ ಉದ್ದಕ್ಕೂ ಚೆಲ್ಲಿತ್ತು. ಮುಖ್ಯರಸ್ತೆ ತಲುಪಿದಾಗ ಅಲ್ಲಿಯೇ ಇದ್ದ ಬಾರು, ವೈನ್ ಸ್ಟೋರು ಮತ್ತು ಬೀಡಾ–ಸಿಗರೇಟು ಗೂಡಂಗಡಿಗಳನ್ನು ಹೊರತುಪಡಿಸಿ ಬಹುತೇಕ ಅಂಗಡಿ





ಚಿತ್ರಗಳು: ಎಸ್.ವಿ. ಹೂಗಾರ